ಸಾಕ್ಷಿಯನ್ನು 04.08.2022 ರಂದು ಕರೆಸಿ ಪ್ರಮಾಣವಚನ ಮಾಡಿಸಲಾಯಿತು. ಪಿ.ಡಬ್ಲ್ಯೂ-1

ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿಪರ ವಕೀಲರಿಂದಃ

1. ಪ್ರತಿವಾದಿಗಳು 18 ಅಡಿ ಅಗಲ ಹಾಗೂ 50 ಅಡಿ ಉದ್ದ ರಸ್ತೆಯನ್ನು ಸೇರಿಸಿ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ. ಅದಕ್ಕೋಸ್ಕರ ಈ ದಾವೆಯನ್ನು ಸಲ್ಲಿರುತ್ತೇನೆ. 3 ನೇ ಪ್ರತಿವಾದಿ ಬಗ್ಗೆ ನನಗೆ ಗೊತ್ತಿಲ್ಲ. ಸದರಿಯವರ ವಿರುದ್ದ ನಾನು ದಾವೆಯನ್ನು ಸಲ್ಲಿಸಿರುವುದಿಲ್ಲ. ನಿಪಿ 1 ರ ಪ್ರಕಾರ ಪ್ರತಿವಾದಿ 1 ಮತ್ತು 2 ರವರು ದಾವಾ ಆಸ್ತಿಯ ಸ್ವಾಧೀನವನ್ನು 1999 ರಲ್ಲಿ ನನಗೆ ಕೊಟ್ಟಿದ್ದಾರೆ ಎಂದರೆ ಸರಿ. ನಿಪಿ 1 ರ ಪ್ರಕಾರ ಅದರಲ್ಲಿ ನಮೂದಿಸಿರುವ ಸ್ವತ್ತನ್ನು 1 ಮತ್ತು 2 ನೆ ಪ್ರತಿವಾದಿಗಳು ನನಗೆ ಬಿಟ್ಟುಕೊಟ್ಟಿದ್ದೆ ಎಂದರೆ ಸರಿ . ಸಾಕ್ಷಿ ಮುಂದುವರಿದು ನಂತರ ಅದನ್ನು ಪ್ರತಿವಾದಿಗಳು 18 ಅಡಿ ಅಗಲ 50 ಅಡಿ ಉದ್ದ ರಸ್ತೆಯನ್ನು ಸೇರಿಸಿಕೊಂಡು ಮಾರಾಟ ಮಾಡಿರುತ್ತಾರೆ ಎಂದು ನುಡಿದಿದ್ದಾರೆ. ಪ್ರತಿವಾದಿಗಳು ಆ ರೀತಿ ಯಾರಿಗೆ ಮಾರಾಟ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಗಳು ಆ ರೀತಿ ಯಾರಿಗೂ ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. ಆ ರೀತಿ ಪ್ರತಿವಾದಿಗಳು ರಸ್ತೆಯನ್ನು ಸೇರಿಸಿಕೊಂಡು ಮಾರಾಟ ಮಾಡಿದ್ದೆ ಆದಲ್ಲಿ ನಾನು ಖರೀದಿದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡುತ್ತಿದ್ದೆ ಎಂದರೆ ಸಾಕ್ಷಿ ಖರೀದಿದಾರರು ಯಾರು ಎಂದು ನನಗೆ ಗೊತ್ತಿಲ್ಲ ಎಂದು ನುಡಿದಿದ್ದಾರೆ.

2. ಮನೆಯನ್ನು ನಾವು ಕಟ್ಟಲು ಇನ್ನು ಶುರು ಮಾಡಿರುವುದಿಲ್ಲ. ಈಗಲು ಕೂಡ ದಾವಾ ಆಸ್ತಿ ಎ ಷೆಡ್ಯೂಲ್ ಖಾಲಿ ಜಾಗ ಎಂದರೆ ಸರಿ. ಮನೆಕಟ್ಟುವ ಸಲುವಾಗಿ ಮುನ್ಸಿಪಾಲಿಟಿಯಿಂದ ಪರವಾನಗಿಯನ್ನು ಪಡೆದುಕೊಂಡಿರುತ್ತೇನೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಮನೆಕಟ್ಟುವ ಸಲುವಾಗಿ ನಕ್ಷೆಯನ್ನು ಮಾಡಿಸಬೇಕು ಎಂದರೆ ಸರಿ. ನಕ್ಷೆ ಮಾಡಿಸುವ ಸಲುವಾಗಿ ನಗರಸಭೆ ಅಧಿಕಾರಿಗಳು ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿರುತ್ತಾರೆ ಆದರೆ ರಸ್ತೆ ಇರದ ಕಾರಣ ನಕ್ಷೆಯನ್ನು ನೀಡಿರುವುದಿಲ್ಲ ಎಂದು ನುಡಿದಿದ್ದಾರೆ. ಇ ಸ್ವತ್ತನ್ನು ನೀಡಬೇಕಾದರೆ ನಗರಸಭೆಯ ಅಧಿಕಾರಿಗಳು ಸ್ಥಳಕೆ ಬಂದು ಸ್ವತ್ತನ್ನು ಪರಿಶೀಲಿಸಿದ ನಂತರವೆ ಕೊಡುವುದು ಎಂದರೆ ಸರಿ. ಆಗ ನಾವು ನಗರಸಭೆ ಅಧಿಕಾರಿಗಳಿಗೆ ದಕ್ಷಿಣ ದಿಕ್ಕಿನಲ್ಲಿ ದಾರಿ ಇಲ್ಲ ಎಂದು ತಿಳಿಸಿರಲಿಲ್ಲ ಎಂದರೆ ಸಾಕ್ಷಿ ಆ ಸಮಯದಲ್ಲಿ ನಮ್ಮ ಆಸ್ತಿಯ ದಕ್ಷಿಣ ದಿಕ್ಕಿಗೆ ಯಾವುದೇ ಮನೆಯನ್ನು ಕಟ್ಟಿರಲಿಲ್ಲ ಎಂದು ನುಡಿದಿದ್ದಾರೆ. ಸುಮಾರು 4-5 ವರ್ಷಗಳ ಹಿಂದೆ ನಗರಸಭೆ ಅಧಿಕಾರಿಗಳು

ಆಸ್ತಿಯ ಪರಿಶೀಲನೆಗೆ ಬಂದಿದ್ದರು. ನನ್ನ ಆಸ್ತಿಯ ದಕ್ಷಿಣದ ಕಡೆ 18 ಅಡಿ ರಸ್ತೆಯನ್ನು ಆಕ್ರಮಿಸಿಕೊಂಡಿರುವವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲು ನನಗೆ ತೊಂದರೆ ಇಲ್ಲ ಎಂದರೆ ಸಾಕ್ಷಿ ನನಗೆ ಅವರು ಯಾರು ಎಂದು ಗೊತ್ತಿಲ್ಲ ಎಂದು ನುಡಿದಿದ್ದಾರೆ. 1999 ರಿಂದ ಇವತ್ತಿನವರೆಗು ಕೂಡ ನಾನು ಖರೀದಿ ಮಾಡಿರುವ ಸ್ವತ್ತು ಖಾಲಿ ನಿವೇಶನ ಎಂದರೆ ಸರಿ. 18 ಅಡಿ ರಸ್ತೆಯನ್ನು ಆಕ್ರಮಿಸಿಕೊಂಡಿರುವ ವಿಚಾರ ನಾನು ಆಸ್ಪತ್ರೆಯಲ್ಲಿ 4-5 ವರ್ಷಗಳ ಹಿಂದೆ ಇದ್ದಾಗ ನಮ್ಮ ಹುಡುಗರು ನನಗೆ ತಿಳಿಸಿರುತ್ತಾರೆ. ಯಾರು ಆ ರೀತಿ ರೋಡನ್ನು ಸೇರಿಸಿಕೊಂಡು ಮನೆ ನಿರ್ಮಾಣ ಮಾಡುತ್ತಿದ್ದಾರೆ ಎಂದು ನನಗೆ ತಿಳಿಸಿರುವುದಿಲ್ಲ. 1990 ರಿಂದ ಇಲ್ಲಿಯವರೆಗು 1 ಮತ್ತು 2 ನೆ ಪ್ರತಿವಾದಿಗಳು ನನ್ನ ಸ್ವತ್ತಿಗೆ ಯಾವುದೆ ತೊಂದರೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ 1 ರಲ್ಲಿ ನಮೂದಿಸಿರುವ ಸರೋಜಮ್ಮನವರ ಮಕ್ಕಳು 1 ಮತ್ತು 2 ನೆ ಪ್ರತಿವಾದಿಯಾಗಿರುತ್ತಾರೆ. ಸರೋಜಮ್ಮನವರ ಬೇರೆ ವಾರಸುದಾರರನ್ನು ನಾನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿ ಸರೋಜಮ್ಮನಿಗೆ ಯಾವುದೆ ಮಕ್ಕಳು ಇರಲಿಲ್ಲ ಎಂದು ನುಡಿದಿದ್ದಾರೆ. 1990 ರಲ್ಲಿ ನನಗೆ ಪ್ರತಿವಾದಿಗಳು 18 ಅಡಿ ರಸ್ತೆಯನ್ನು ಈಗಾಗಲೆ ಬಿಟ್ಟುಕೊಟ್ಟಿರುವುದರಿಂದ ಪುನಃ ಅದನ್ನು ಬಿಟ್ಟುಕೊಡುವ ಪ್ರಮೇಯ ಇಲ್ಲ ಎಂದರೆ ಸರಿಯಲ್ಲ. ಸುಮಾರು 23 ವರ್ಷದಿಂದ ದಾವಾ ಆಸ್ತಿಯ ಸ್ವಾಧೀನದಲ್ಲಿ ನಾನೆ ಇರುವುದರಿಂದ ನನಗೆ 18 ಅಡಿ ರಸ್ತೆಯನ್ನು ಬಿಟ್ಟುಕೊಡುವ ಪ್ರಶ್ನೆ ಇಲ್ಲ ಎಂದರೆ ಸಾಕ್ಷಿ 18 ಅಡಿ ರಸ್ತೆ ಸೇರಿಸಿಕೊಂಡು ಮಾರಾಟ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಒಂದು ವೇಳೆ ಪ್ರತಿವಾದಿಗಳು 18 ರಸ್ತೆ ಸೇರಿಸಿಕೊಂಡು ಮಾರಾಟ ಮಾಡಿದ್ದೆ ಆದಲ್ಲಿ ನಾನು ಸದರಿ ಖರೀದಿದಾರರನ್ನು ಮತ್ತು ದಾಖಲೆಯನ್ನು ಹಾಜರುಪಡಿಸುತ್ತಿದ್ದೆ ಎಂದರೆ ಸಾಕ್ಷಿ ನನಗೆ ಅವರು ಯಾರು ಗೊತ್ತಿಲ್ಲ ಎಂದು ನುಡಿದಿದ್ದಾರೆ.

**<u>ಮರು ವಿಚಾರಣೆ ಇಲ್ಲ.</u>**

(ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇ.

ಪಿ.ಸಿ.ಜೆ. ಮತ್ತು ಜೆಎಂಎಫ್‌ಸಿ,

ಮಳವಳ್ಳಿ